ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 6-11
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಕಲಾ ಮಾಧ್ಯಮವಾಗಿ ಕುಂಬಾರಿಕೆ

ಆಶಾಲತಾ[1] ಮತ್ತು ಡಾ. ಶಾಂತರಾಜು ಎಚ್. ವಿ [2]

[1]ಸಂಶೋಧನಾ ವಿದ್ಯಾರ್ಥಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ. ದಾವಣಗೆರೆ.
[2]ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ. ದಾವಣಗೆರೆ.

Abstract:

ಇತಿಹಾಸ ಪೂರ್ವದಿಂದಲೂ ಕಲಾ ಜಗತ್ತಿನ ಚರಿತ್ರೆಯಲ್ಲಿ ದೃಶ್ಯ ಕಲಾ ಮಾಧ್ಯಮವಾಗಿ ಮಣ್ಣು ಎಲ್ಲರ ಗಮನವನ್ನು ಸೆಳೆಯುತ್ತಲೇ ಬಂದಿದೆ. ಹಿಂದಿನಿಂದ ಇಂದಿನ ವರೆಗೆ ಪ್ರಪಂಚದ ಎಲ್ಲಾ ಕಡೆಗಳಲ್ಲಿ ಪ್ರಾಯೋಗಿಕ ಕಲೆಯಾಗಿ ಮಣ್ಣು ನಮ್ಮೊಂದಿಗೆ ಬೇರ್ಪಡಿಸಲಾರದಂತೆ ಬೆಳೆದು ಬಂದಿದೆ. ಇದು ಸಾಮಾನ್ಯರಿಗೂ ಕೂಡಾ ದೊರಕುವುದರಿಂದ ಎಲ್ಲರೂ ಇದರಲ್ಲಿ ತಮ್ಮ ಸಿದ್ಧಿಯನ್ನು ಗಳಿಸಿಕೊಂಡಿದ್ದಾರೆ. ನಮ್ಮಲ್ಲಿ 'ಮಣ್ಣಿನ ಕಲೆ ಬಡವನ ಶಿಲ್ಪ' ಎಂಬ ನುಡಿಗಟ್ಟೊಂದು ಇದೆ. ಬರಿ ಮಡಿಕೆ ಕುಡಿಕೆಗಳಿಗೆ ಇದು ಸೀಮಿತವಾಗಿರದರೆ, ಮೂರ್ತಿ ಶಿಲ್ಪಕ್ಕೂ ಶತಮಾನದಿಂದ ಬಳಕೆಯಾಗುತ್ತಾ ಬಂದಿದೆ. ಆಕಾಶದೆತ್ತರಕ್ಕೆ ಈ ಮಣ್ಣನ್ನು ಬೆಳೆಯುವಂತೆ ಮಾಡಿದ, ಅದರೊಂದಿಗೆ ತಾನೂ ಬೆಳೆದ ಕುಂಬಾರ ಒಂದು ಅರ್ಥದಲ್ಲಿ ಮಹಾನ್ ಕಲಾವಿದ. ಇದರಿಂದ ಈ ನೆಲದ ನಾಗರಿಕತೆಯನ್ನು, ಉಜ್ವಲ ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಮಣ್ಣಿನ ಪಾತ್ರ ಬಹು ದೊಡ್ಡದು.

Keywords: *ದೃಶ್ಯಕಲೆ, ಕಲಾ ಮಾಧ್ಯಮ, ಮಣ್ಣು, ಕುಂಬಾರ, ಕುಂಬಾರಿಕೆ, ಕರಕುಶಲ ಕಲೆ.*

ಪೀಠಿಕೆ

ಕುಂಬಾರಿಕೆ ಕೇವಲ ಮಡಿಕೆ ಕುಡಿಕೆ ಮಾಡುವಲ್ಲಿ ಮಾತ್ರ ಸೀಮಿತವಾಗಿಲ್ಲ. ನಾಗರಿಕತೆ ಬೆಳೆದಂತೆ ಕುಂಬಾರನು ಇದನ್ನು ಕಲಾ ಮಾಧ್ಯಮವಾಗಿ ಬಳಸಿಕೊಂಡನು. ಆಟಿಕೆ ಸಾಮಾನು, ದೈವದ ಮೂರ್ತಿಗಳು, ಅಲಂಕರಣ ಸಾಮಾನುಗಳನ್ನಾಗಿ ಮಣ್ಣಿನಲ್ಲಿ ಅರಳಿಸುವ ಕೌಶಲ್ಯವನ್ನು ಕಂಡುಕೊಂಡನು. ಗೊಂಬೆ ಮತ್ತು ಆಟಿಕೆ ಸಾಮಾನುಗಳನ್ನು ಮಣ್ಣಿನಿಂದ ಮಾಡುವ ಕಲೆ ಪ್ರಾಚೀನ ನಾಗರಿಕತೆಯಲ್ಲಿ ಭಾರತ ಮೊದಲಿನದು. ಈ ಹಿನ್ನಲೆಯನ್ನು ಗಮನಿಸಿದಾಗ ಸಿಂಧೂ ನಾಗರಿಕತೆಯಲ್ಲಿ ನಮಗೆ ಹೆಚ್ಚು ಮಂಗ, ಕುರಿ, ನಾಯಿ, ಹಂದಿ, ಗೂಳಿ, ಸುಂದರವಾದ ಹೆಣ್ಣಿನ ಮತ್ತು ಗಂಡಿನ ಮೂರ್ತಿಗಳು, ಪ್ರಾಣಿ, ಪಕ್ಷಿ ಹೀಗೆ ಸಾಕಷ್ಟು ಸಂಖ್ಯೆಯ ಮಣ್ಣಿನ ಮುದ್ರಿಕೆಗಳು ಹಾಗೂ ಸುಟ್ಟಮಣ್ಣಿನ ಮೂರ್ತಿಗಳು ದೊರಕುತ್ತವೆ.

ನಮ್ಮ ದೇಶದಲ್ಲಿ ದಸರಾ, ಗೌರಿ–ಗಣೇಶ ಮುಂತಾದ ಹಬ್ಬಗಳ ಸಂದರ್ಭದಲ್ಲಿ ಬಗೆಬಗೆಯ ಗೊಂಬೆಗಳು ಹಾಗೂ ದೇವರ ಮೂರ್ತಿಗಳನ್ನು ಕೂರಿಸುವ ಪರಿಪಾಠವಿದೆ. ಮೈಸೂರು ದಸರಾ ಸಂದರ್ಭದಲ್ಲಿ ಪಿಂಗಾಣಿಗಿಂತ ಮೊದಲು ಮಣ್ಣಿನ ಗೊಂಬೆಗಳನ್ನು ಮನೆಮನೆಗಳಲ್ಲಿ ಇಡುತ್ತಿದ್ದರು. ಶಾಂತಿನಿಕೇತನದ ಪ್ರಭಾವದಿಂದ ಬಂಗಾಲದಲ್ಲಿ ರೈತರು ಬಳಸುವ ಪರಿಕಾರಗಳಾದ ಬಂಡಿ, ಎತ್ತು, ದನಕರುಗಳು, ಗುಡಿ, ಗುಡಿಸಲುಗಳನ್ನು ಮಣ್ಣಿನಲ್ಲಿ

Please cite this article as: ಆಶಾಲತಾ ಮತ್ತು ಶಾಂತರಾಜು ಎಚ್. ವಿ. (2024). ಕಲಾ ಮಾಧ್ಯಮವಾಗಿ ಕುಂಬಾರಿಕೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 6–11

ಮಾಡುತ್ತಾರೆ. ಇಲ್ಲಿನ ಕೃಷ್ಣನಗರದ ಮಣ್ಣಿನ ಮೂರ್ತಿಗಳು ವಿಶ್ವದಾದ್ಯಂತ ಹೆಸರು ಪಡೆದಿವೆ. ಅಸ್ಸಾಂ, ಬಿಹಾರ ರಾಜ್ಯಗಳಲ್ಲಿ ಮಣ್ಣಿನ ಮೂರ್ತಿ ಹೆಸರು ಪಡೆದಿವೆ. ಪ್ರಾಣಿ, ಪಕ್ಷಿ ಮುಖವುಳ್ಳ ಸ್ತ್ರೀಮೂರ್ತಿಗಳು, ಅಸ್ಸಾಂ ವರ್ಣಾಲಂಕಾರವುಳ್ಳ ನೃತ್ಯದ ಮಣ್ಣಿನ ಮೂರ್ತಿಗಳು ಪೌರಾಣಿಕ ಕಥೆಗಳನ್ನು ಹೇಳುತ್ತವೆ. ಇಲ್ಲಿ ಜನರಿಗೆ ಮಣ್ಣಿನ ಮೇಲೆ ಬಲು ಪ್ರೀತಿ. ಇಲ್ಲಿಯ ರೈಲ್ವೆ ನಿಲ್ದಾಣಗಳಲ್ಲಿರುವ ಟೀ ಪಾಯಿಂಟ್‌ಗಳಲ್ಲಿ ಚಹಾವನ್ನು ಪ್ಲಾಸ್ಟಿಕ್ ಇಲ್ಲವೇ ಕಾಗದದ ಕಪ್‌ಗಳಲ್ಲಿ ನೀಡದೆ ಮಣ್ಣಿನ ಕಪ್‌ಗಳನ್ನು ಬಳಸುವಂತೆ ಅದೇಶ ಹೊರಡಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಶಾತವಾಹನರ ಕಾಲದ ಆನೆ, ಕುದುರೆ ಇತ್ಯಾದಿ ಮಣ್ಣಿನ ಮೂರ್ತಿಗಳು ಇಂದಿಗೂ ಕಣ್ಮನ ಸೆಳೆಯುತ್ತವೆ. ಅಲಂಕರಣ ಮಾಡಿದ ವರ್ಣಮಯವಾದ ಮಡಿಕೆಗಳು ಬಹು ಪ್ರಾಚೀನ ಸಂಸ್ಕೃತಿಯಲ್ಲಿಯೇ ನಮಗೆ ದೊರಕುತ್ತವೆ. ಆಧುನಿಕ ಯುಗದಲ್ಲಿ ಕುಂಬಾರರು ಸೇರಿದಂತೆ ಇತರರು ಕೂಡಾ ಅಮೂರ್ತ ಶಿಲ್ಪಗಳ ರಚನೆಗೆ ಮಣ್ಣನ್ನು ಬಳಸುತ್ತಿದ್ದಾರೆ. ಮಣ್ಣಿನೊಂದಿಗೆ ಈಗೀಗ ಕುಂಬಾರರು ಸಿಮೆಂಟ್‌ದಲ್ಲಿ ಮೂರ್ತಿ ಮಾಡುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಿದ್ದಾರೆ. ಅದು ಅವರ ಬದುಕಿಗೆ ಅನಿವಾರ್ಯವೂ ಆಗುತ್ತಿದೆ. ಪ್ರಾಚೀನದಿಂದ ಅರ್ವಾಚೀನದವರೆಗೂ, ವಿಶ್ವದಾದ್ಯಂತ ನಡೆದ ಉತ್ಖನನಗಳಲ್ಲಿ ದೊರೆತ ಮಡಿಕೆಗಳಲ್ಲಿ, ಜ್ಯಾಮಿತಿಯ ರೇಖಾ ಚಿತ್ರಗಳನ್ನು, ನವಿಲು, ಜಿಂಕೆ, ಹಕ್ಕಿ ಬಸವ, ನಾಯಿ ಮೊದಲಾದ ಪ್ರಾಣಿಗಳು ಹಾಗೂ ಹೂವು, ಗಿಡ, ಬಳ್ಳಿ ಚಿತ್ರಗಳನ್ನು ಕಾಣಬಹುದು. ಈ ಚಿತ್ರಗಳನ್ನು ಮಡಕೆಗಳು ತಕ್ಕಮಟ್ಟಿಗೆ ಹಸಿ ಇರುವಾಗಲೇ ಡಬ್ಬಣ, ಸೂಜಿಯಂತಹ ಮೊನಚಾದ ವಸ್ತುವಿನಿಂದ ಚುಚ್ಚಿ ಬಿಡಿಸಲಾಗಿದೆ. ಅನೇಕ ಮಡಿಕೆಗಳಲ್ಲಿ ಕಚ್ಚು ಹೊಡೆದು, ಚಿತ್ತಾರಗಳನ್ನು ಬಿಡಿಸಲಾಗಿದೆ, ಇದಲ್ಲದೆ ಮುದ್ರೆಗಳನ್ನು ಒತ್ತಿ ಮಡಕೆಗಳನ್ನು ಅಲಂಕರಿಸಿರುವುದು ಕಂಡುಬರುತ್ತದೆ.

ಕರಕುಶಲ ಕಲೆಗಳಲ್ಲಿ ಪ್ರಮುಖವೆನ್ನಲಾದ ಕುಂಬಾರಿಕೆ ಅಥವಾ ಮೃತ್ತಿಕಾ ಶಿಲ್ಪಕಲೆಯನ್ನು ಇಂದಿಗೂ ಜೀವಂತವಾಗಿ ಕಾಯ್ದುಕೊಂಡುಬಂದ ಹಲವಾರು ಕೇಂದ್ರಗಳು ಭಾರತದಾದ್ಯಂತ ಹರಡಿವೆ. ಸಿಂಧ್, ಪಂಜಾಬ್‌ದೊಂದಿಗೆ ಗುಜರಾತ್, ದೆಹಲಿ, ಕಾಶ್ಮೀರ, ಜಲಂಧರ್, ಮಧುರೈ ಮತ್ತು ಕರ್ನಾಟಕದ ವಿವಿಧೆಡೆಗಳಲ್ಲಿ ಈ ಕಲಾಪರಂಪರೆಯು ಕಾಯ್ದುಕೊಂಡು ಬಂದಿವೆ, ಇಂತಹ ಹೆಸರು ಪಡೆದ ಸ್ಥಳಗಳಲ್ಲದೆ ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿ ಈ ಕಲೆಯು ಇಂದಿಗೂ ಜೀವಂತವಾಗಿರುವುದನ್ನು ಕಾಣುತ್ತೇವೆ. ಇಂತಹ ಪ್ರಾಚೀನ ಕಲೆಗಳೊಂದಿಗೆ ಪಿಂಗಾಣಿ, ಗಾಜು ಮುಂತಾದ ಸಲಕರಣೆಗಳೊಂದಿಗೆ ಪ್ರಾಣಿ, ಪಕ್ಷಿ, ಮಾನವ ಮತ್ತು ದೇವತಾ ಮೂರ್ತಿ ಶಿಲ್ಪಗಳು, ವಿವಿಧ ನಮೂನೆಯ ಅಲಂಕಾರಿಕ ವಸ್ತುಗಳು ಕುಂಬಾರಿಕೆಯ ಕರಕುಶಲ ಕಲೆಯ ವಿಸ್ತಿರ್ಣಗಳೇ ಆಗಿವೆ ಎಂದರೆ ತಪ್ಪಾಗಲಾರದು.[1]

ಅಲಂಕಾರಯುತವಾದ ಮೆರಗಿನ ಕಂದು ಬಣ್ಣದ ಹಳದಿ ಗೆರೆಗಳ ವೈವಿಧ್ಯಮಯ ಅಲಂಕಾರದೊಡನೆ ಕೂಡಿದ ಮಣ್ಣಿನ ಮಡಕೆಗಳು ದಕ್ಷಿಣ ಭಾರತದ ವೆಲ್ಲೂರ, ಉತ್ತರ ಅರ್ಕಾಟ್ ಮತ್ತು ಕುಂಭಕೋಣಂಗಳು ಪಚ್ಚೆ ಹಸಿರು ಮತ್ತು ಕಂದು ಬಣ್ಣದ ಮೆರಗಿನ ಮಡಕೆಗಳಿಗೆ ಹೆಸರನ್ನು ಪಡೆದ ಸ್ಥಳಗಳಾಗಿವೆ. ಬಹಳ ಹಿಂದೆ ಇತರ ವಸ್ತುಗಳನ್ನು ಬೆರೆಸಿ ಹಳದಿ ಮಣ್ಣಿನಿಂದ ವಿಶೇಷವಾಗಿ ತಯಾರಿಸಿದ ಮಿಶ್ರಣದಿಂದ ಬಣ್ಣ ಹಾಕಿದ ಕಪ್ಪು ಮಡಕೆಗಳನ್ನು ಮಥುರಾದಲ್ಲಿ ಮಾಡುತ್ತಿದ್ದರು. ಇದರಲ್ಲಿ ಎರಡು ವಿವಿಧ ಮಡಕೆಗಳಲ್ಲಿ, ಬೆಂಕಿಯಲ್ಲಿ ಸುಡುವ ಪೂರ್ವದಲ್ಲಿ ಬಣ್ಣಗೂಡಿಸುವದು. ಎರಡನೆಯದ್ದು, ಸುಟ್ಟ ನಂತರ ಬಣ್ಣಗೂಡಿಸುವದು. ಮಥುರೆಯ ಕಪ್ಪು ಮತ್ತು ಕೆಂಪು ಮಡಕೆಗಳಲ್ಲಿ ಬಣ್ಣ ಹೂಡಿಸಿ ಮೇಲ್ಮೈಗಳ ಮೇಲೆ ಅರಗನ್ನು ಬಳಿಯಲಾಗುತ್ತದೆ. ಆದರೆ ರಾಜಸ್ಥಾನದಲ್ಲಿ ವಿವಿಧ

ಬಣ್ಣದ ಅರಗನ್ನು ಪದರು ಪದರಾಗಿ ಸವರಲಾಗುತ್ತದೆ. ಕುಂಬಾರರು ಈ ಎಲ್ಲಾ ಸಾಂಪ್ರದಾಯಿಕ ಕೆಲಸಗಳಲ್ಲಿ ಗೆರೆ ಮತ್ತು ಬಣ್ಣಗಳಲ್ಲಿ ಸಂಪೂರ್ಣ ಸಂಬಂಧ ಹಾಗೂ ಪ್ರಕೃತಿಯ ತುಂಬಾ ಸೂಕ್ಷ್ಮವಾದ ಅರ್ಥ ವಿತರಣೆ ಪ್ರಚೋದನೆಯನ್ನು ಕೊಟ್ಟಿದ್ದಾರೆ, ಇದರಿಂದ ಭಾರತೀಯ ಕುಂಬಾರರು ಪಾರಂಪಾರಿಕ ಆಕೃತಿಗಳು ಮತ್ತು ಮಾದರಿಗಳಿಗೆ ತುಂಬಾ ವೈವಿಧ್ಯತೆಯನ್ನು ಸೇರಿಸಿದ್ದಾನೆ.[2] ಕುಂಭಾಲಂಕರಣ ಮಾಡುವುದರಲ್ಲಿ ಪ್ರದೇಶಕ್ಕನುಗುಣವಾಗಿ ನಾನಾ ಶೈಲಿಗಳು ಬೆಳೆದು ಬಂದಿದೆ. ವಿಂಕಾ, ಗುಮೆಲ್ ನಿತ್ತಾ, ರುಮೇನಿಯಾ ಮತ್ತು ಉಕ್ರೇನಿನ ಕ್ಯೂಕ್ ಟೆನಿ ಮತ್ತು ಟ್ರಿಪೋಲ್, ಗ್ರೀಕ್, ರೋಮನ್, ಇತ್ಯಾದಿ ಕೆಲವು ಶೈಲಿಗಳಲ್ಲಿ ನೀಳ ಮಡಕೆಗಳಿಗೆ, ಕೆಲವು ಗುಡಾಣದಂತಹ ದುಂಡಾಕೃತಿಯ ಮಡಿಕೆಗಳಿಗೆ ಪ್ರಾಧ್ಯಾನತೆ ನೀಡಿರುವುದು ಕಂಡುಬರುತ್ತದೆ. ಮಡಿಕೆಗಳಿಗೆ ಗಾಜಿನ ಮೈ ಭರಿಸುವ ಕಲೆ ಪ್ರಾಚೀನ ಕಾಲದಲ್ಲಿಯೇ ಕುಂಬಾರರಿಗೆ ತಿಳಿದಿತ್ತು. ಮಣ್ಣಿನಿಂದ ಮಾಡಿದ ಅಲಂಕರಣಗಳನ್ನು ಅಂಟಿಸುವುದೇ ಪ್ರತಿಮಾಲಂಕರಣ, ಬೇರೆ ಬೇರೆ ನಮೂನೆಗಳನ್ನು ಮರ ಇಲ್ಲವೆ ಮಣ್ಣಿನ ಅಚ್ಚಿನಲ್ಲಿಟ್ಟು ಅವುಗಳನ್ನು ತೆಗೆದು ಅಂಟಿಸುವರು. ಪ್ರತಿಮೆಗಳನ್ನು ನೇರವಾಗಿಯೇ ಮಡಕೆಯ ಮೈಮೇಲೆ ಮಾಡಬಹುದು. ಉದಾಹರಣೆಗೆ ನೀರಿನ ಹೂಜಿಗಳಿಗೆ, ಹಿಡಿಯನ್ನು ಅಂಟಿಸುವುದು. ತತ್ರಾಣಿಗೆ ಬಾಯನ್ನು ಅಂಟಿಸುವದು, ಜಾಡಿಯ ಮುಚ್ಚಳಕ್ಕೆ ಬಿರುಡೆಯನ್ನು ಅಂಟಿಸುವದು. ಕಚ್ಚು ಅಲಂಕರಣ ಬರ್ಮಾದ ಹಾಗೆ ಒಣಗಿದ ಮಡಕೆಯ ಮೈಮೇಲೆ ಚಿತ್ತಾರಗಳನ್ನು ಕೆತ್ತುವದಕ್ಕೆ; ಕಚ್ಚು ಹೊಡೆಯುವದಕ್ಕೆ ಕಚ್ಚು ಅಲಂಕರಣ ಎನ್ನುತ್ತಾರೆ. ಕಚ್ಚು ಹೊಡೆಯಲು ಸಾಮಾನ್ಯವಾಗಿ ಡಬ್ಬಣವನ್ನು ಮೊನಚಾದ ವಸ್ತುಗಳನ್ನು ಬಿದುರಿನ ಕಡ್ಡಿಗಳನ್ನು ಉಪಯೋಗಿಸುವರು. ಮಡಕೆಯ ಮೈ ಬಹಳಷ್ಟು ಒಣಗಿರಬಾರದು. ಚೀನಾದ ಟಂಗ್ ಮತ್ತು ಸಂಗ್ ವಂಶದ ಅರಸರ ಕಾಲದಲ್ಲಿ ಪಿಂಗಾಣಿ ಪಾತ್ರೆಗಳಿಗೆ ಕಚ್ಚಿನ ಅಲಂಕರಣ ಮಾಡುವ ರೂಢಿ ಇತ್ತು. ಮುದ್ರಾಲಂಕರಣದಲ್ಲಿ ಪೂರ್ವಭಾವಿಯಾಗಿ ತಯಾರಿಸಿದ ಅಚ್ಚುಗಳಿಂದ ಮುದ್ರೆ ಒತ್ತುವುದನ್ನು ಮುದ್ರಾಲಂಕರಣ ಎನ್ನುವರು. ಇದು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಮುದ್ರೆಗಳ ನಮೂನೆಗಳನ್ನು ಮರ, ಪ್ಲ್ಯಾಸ್ಟರ್ ಆಫ್ ಪ್ಯಾರಿಸ್‌ದಲ್ಲಿ ಮಾಡುವರು. ಕಪ್ಪೆ ಚಿಪ್ಪನ್ನು ಈ ಮುದ್ರಾಲಂಕರಣಕ್ಕೆ ಬಳಸುತ್ತಾರೆ. ಈ ವಿಧಾನದಲ್ಲಿ ರೋಮನ್ನರು ಪ್ರಸಿದ್ಧಿಯನ್ನು ಪಡೆದಿದ್ದರು. ಹಲವು ಬಗೆಯ ವರ್ಣದ ದ್ರವರೂಪದ ಮಣ್ಣನ್ನು ಸಿದ್ಧಪಡಿಸಿ ಮಡಕೆಗಳಿಗೆ ಲೇಪಿಸುವುದೇ ಸಂಗಮರಿ ಶಿಲಾಲಂಕರಣ. 17ನೆಯ ಶತಮಾನದ ಐರೋಪ್ಯದಲ್ಲಿ ಮಾರ್ಬಲಿಂಗ ಅಲಂಕರಣ ಹೆಚ್ಚಾಗಿ ಬಳಕೆಯಲ್ಲಿತ್ತು. ಚಪ್ಪಟೆ ಆಕೃತಿಯ ಕುಂಭಗಳಿಗೆ ಇದನ್ನು ಮಾಡುತ್ತಾರೆ. ವಿವಿಧ ವರ್ಣಗಳಿಂದ ಬ್ರಷ್ ಮೂಲಕ ಬಣ್ಣ ಹಾಕುವ, ಮೆರಗುಗೊಳಿಸುವ ವಿಧಾನ ಬಹುಕಾಲದಿಂದಲೂ ಮುಂದುವರಿಸಿಕೊಂಡು ಬಂದಿದೆ. ಗ್ಲೇಸಿಂಗ್ ಮಾಡುವಾಗಲೇ ಇದನ್ನು ಮಾಡುವರು. ಗ್ಲೇಸಿಂಗ್ ಕೂಡಾ, ಕುಂಭಗಳಿಗೆ ಒಂದು ರೀತಿಯ ಅಲಂಕಾರವನ್ನು ಒಸಗಿಸುವುದು. ಈ ಅಲಂಕಾರಣಗಳಲ್ಲದೆ ಸ್ಲಿಪ್‌ಪೇಟಿಂಗ್ ಎನ್ನುವ ಇನ್ನೊಂದು ಪ್ರಕಾರವಿದೆ. ದ್ರವರೂಪದ ಮಣ್ಣಿಗೆ 'ಸ್ಲಿಪ್' ಎಂದು ಕರೆಯುತ್ತಾರೆ. ಬ್ರಷ್‌ನಿಂದ ತೆಳು ಲೇಪನವನ್ನು ಕೊಟ್ಟು ಕುಂಭವನ್ನು ಅಂದಗೊಳಿಸುವರು.[3]

ವೈಜ್ಞಾನಿಕವಾಗಿ ಕುಂಭೋದ್ಯಮಗಳು ಬೆಳೆದದ್ದನ್ನು ಕಾಣಬಹುದು. ಮಣ್ಣನ್ನು ಹೊರತುಪಡಿಸಿ ಇತರ ಪ್ರಕಾರಗಳು ಕುಂಭಕಲೆಯ ಪರಿಮಿತಿಯಲ್ಲಿ ಬರುವುದಿಲ್ಲ. ಮೂಲತಃ ಕುಂಬಾರನಿಂದ ಸಿದ್ದವಾದವುಗಳನ್ನು ಕುಂಭಕಲೆಯಲ್ಲಿ ಸೇರಿಸಿಕೊಳ್ಳಬಹುದು. ಮಣ್ಣು ಸುಟ್ಟು ಮಡಕೆಯಾದ ಮೇಲೆ ಅದು ಪುನಃ ಮೊದಲಿನ ರೂಪಕ್ಕೆ ಬರುವುದಿಲ್ಲ. ಕುಂಬಾರಿಕೆ ಎಂಬ ಪದವು ಒಂದು

ಸಮೂಹ ಸೂಚಕ ಪದವಾಗಿದ್ದು, ಅದನ್ನು ಲೇಡಿ ಮಣ್ಣಿನಿಂದ ತಯಾರಿಸಿದ ಯಾವುದೇ ವಸ್ತುವನ್ನು ವಿವರಿಸಲು ಬಳಸಬಹುದು. ಇದನ್ನು 450 ರಿಂದ 700 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಬಿಸಿ ಮಾಡಲಾಗುತ್ತದೆ. ಹೀಗಾಗಿ ಅದು ರಾಸಾಯನಿಕ ಗುಣದೊಂದಿಗೆ ಸಂಯೋಜಕ ನೀರನ್ನು ಕಳೆದುಕೊಳ್ಳುತ್ತದೆ. ರಾಸಾಯನಿಕವಾಗಿ ಪರಿವರ್ತಿತಗೊಂಡು ಕಲ್ಲಿನಂತಹ ವಸ್ತುವಾಗಿ ಅದರ ಮೂಲ ಮಣ್ಣಿನ ಸ್ಥಿತಿಗೆ ಹಿಂತಿರಗಲು ಸಾಧ್ಯವಾಗದ ರೀತಿಯಲ್ಲಿರುತ್ತದೆ.

ಸಾಮಾನ್ಯವಾಗಿ ಜೇಡಿ ಮಣ್ಣಿನಿಂದ ಮಾಡಿ ಅವಿಗೆಯಲ್ಲಿ ಸುಟ್ಟ ಎಲ್ಲ ವಿವಿಧ ಮಣ್ಣಿನಿಂದ ಮಾಡಿದ ಮಡಕೆ ಕುಡಿಕೆ ಮೊದಲಾದವುಗಳು ಮೊದಲ ಪ್ರಬೇಧದಲ್ಲಿ ಬರುತ್ತವೆ. ಟೆರ್ರಾಕೋಟ ಮತ್ತು ಗ್ಲೇಸ್ಟ್ ಇರದ ಮಡಕೆಗಳು ಈ ವರ್ಗದವು. ಇವು ಸಾಮಾನ್ಯವಾಗಿ 400 ರಿಂದ 800 ಸೆಲ್ಸಿಯಸ್ ಶಾಖದಲ್ಲಿ ಸುಡಲ್ಪಡುತ್ತವೆ. ಇವು ಗಡುಸಾಗಿರುವುದಿಲ್ಲ. ಸುಲಭವಾಗಿ ಇವುಗಳ ಮೇಲೆ ಕಲೆ ಬೀಳುತ್ತವೆ. ಪ್ರಾಚೀನ ಮೆಡಿಟೇರಿಯನ್ ಮತ್ತು 16ನೆಯ ಶತಮಾನದ ವರೆಗಿನ ಚೀನಾ ಜಪಾನ್ ದೇಶದ ಮಡಿಕೆಗಳು ಈ ವರ್ಗದವುಗಳು. ಹೆಚ್ಚಿನ ತಾಪಮಾನದಲ್ಲಿ ಸುಟ್ಟ ಮಡಕೆಗಳನ್ನು ಕಲ್ಮಡಕೆಗಳೆನ್ನುತ್ತಾರೆ. ಮಡಕೆಗಳು ಸುಟ್ಟ ಮೇಲೆ ಕಲ್ಲಿನಂತೆ ಕಠಿಣತೆಯನ್ನು ಪಡೆಯುತ್ತವೆ. ಕಲ್ಗಡಿಗೆ ಜೇಡಿ ಮತ್ತು ಬೆಣಚು ಜೇಡಿ ಬೆರೆತ ಮಿಶ್ರಣದಿಂದ ಕಲ್ಮಡಿಕೆ ತಯಾರಿಸುವರು. ಇವನ್ನು ಸಾಮಾನ್ಯವಾಗಿ 1200 ರಿಂದ 1300 ಡಿಗ್ರಿ ಸೆಲಿಯಸ್ ಶಾಖದಲ್ಲಿ ಸುಡುವರು. ಆರೋಗ್ಯ ಮತ್ತು ಅಂದದ ದೃಷ್ಟಿಯಿಂದ ಇವುಗಳಿಗೆ ಗಾಜಿನ ಲೇಪನವನ್ನು ಬಡಿಸುವರು. ಪಿಂಗಾಣಿ ವಸ್ತುಗಳು ಚೀನಿ ಮಣ್ಣಿನಿಂದಾದವುಗಳು. ಚೀನಿ ಭಾಷೆಯಲ್ಲಿ ಪಿಂಗಾಣಿಗೆ 'ಕೆಯೊಲಿನ್' ಎನ್ನುತ್ತಾರೆ. ಕೆಯೊಲಿನ್ ಎಂದರೆ ಉನ್ನತವಾದ ಬೆಟ್ಟ ಎಂದರ್ಥ.[4] ಮೊದಲು ಈ ಬೆಟ್ಟಗಳಿಂದಲೇ ಮಣ್ಣನ್ನು ತಂದಿರಬೇಕು. ಸಾಮಾನ್ಯವಾಗಿ 1200 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಬೇಯಿಸುವರು. ಬರ್ಲಿನಿನ ಜಾನ್‌ಫ್ರೆಡ್ಟ್ ಬೊಟಜರ್ ಎಂಬವನು ಗಡಸು ಪಿಂಗಾಣಿಯನ್ನು ಕಂಡುಹಿಡಿದನು. ಚೀನಿ ಮಣ್ಣು ಮತ್ತು ಚೀನಿ ಕಲ್ಲುಗಳು ಗಡಸು ಪಿಂಗಾಣಿಯ ಘಟಕಗಳು. ಗಾಜಿನಂತಹ ನುಣುಪು ಚೀನಿ ಕಲ್ಲನ್ನು ಗರಿಷ್ಠ ಉಷ್ಣತೆಯಲ್ಲಿ ಕರಗದೆ ಕೆಯೋಲಿನ್ ಜೊತೆ ಅಂಟಿಕೊಳ್ಳುವುದು. ಇದರಿಂದ ಗಡಸು ಪಿಂಗಾಣಿಯು ಸಿದ್ಧವಾಗುತ್ತದೆ. ಜೊತೆಗೆ ಗಾಜಿನಂತಹ ಪಾರದರ್ಶಕ ಗುಣವನ್ನು ಪಡೆಯುತ್ತದೆ. ನುಣ್ಣಗೆ ಪುಡಿ ಮಾಡಿದ ಮರಳು ಮತ್ತು ಶ್ರಾವಕ ವಸ್ತುಗಳ ಮಿಶ್ರಣ, ಕಾಚ ದ್ರವ್ಯ ಅಥವಾ ಒಡೆದ ಪಿಂಗಾಣಿ ವಸ್ತು ಮೊದಲಾದ ಸಿಲಿಕೇಡ್‌ಗಳನ್ನು ಸುಟ್ಟ ಜೇಡಿಮಣ್ಣಿನ ಜೊತೆ ಕರಗಿಸಿ ಮಾಡಿದ ತೆಳು ದ್ರಾವಣದಿಂದ ಮೆದು ಪಿಂಗಾಣಿಯನ್ನು ತಯಾರಿಸುವರು. ಇದು ಬಣ್ಣದಲ್ಲಿ ತುಸು ಹಳದಿ ಛಾಯೆಯ ಕೆನೆ ಬಣ್ಣವನ್ನು ಹೊಂದಿರುತ್ತದೆ. ಪಿಂಗಾಣಿಯ ಇನ್ನೊಂದು ಕೃತಕ ಪ್ರಕಾರವನ್ನು 'ಅಸ್ಥಿ ಪಿಂಗಾಣಿ' ಎನ್ನುತ್ತಾರೆ. ಕೆಯೋಲಿನ್ ಮತ್ತು ಒಂದು ಭಾಗ ಅಸ್ತಿ ಭಸ್ಮ ಇವುಗಳ ಮಿಶ್ರಣದಿಂದ ಇದನ್ನು ತಯಾರಿಸುವರು. ಈ ಪಿಂಗಾಣಿ ವಸ್ತುಗಳು ಆಮ್ಲಗಳನ್ನು ತಡೆದುಕೊಳ್ಳಬಲ್ಲವು. ಕ್ರಿ.ಶ.1350ರಲ್ಲಿ ಇಂಗ್ಲೆಂಡಿನ ಪ್ರಯೋಗಾಲಯದಲ್ಲಿ ಕಂಡು ಹಿಡಿದ ಪಿಂಗಾಣಿ ವಸ್ತುಗಳು ಮೆದು ಪಿಂಗಾಣಿಗಿಂತ ಶುಭ್ರವಾಗಿರುತ್ತವೆ. ಇದರಲ್ಲಿ ಪ್ರಾಸ್ಪೇಟ್ ಸೇರ್ಪಡೆಯಾಗಿರುವುದರಿಂದ ಕರಗಿಸಲು ಇದು ಸುಲಭವಾಗಿರುತ್ತದೆ.[5]

ಪಾಶ್ಚಾತ್ಯ ದೇಶಗಳಿಗೆ ಸುಮಾರು 16–17 ನೆಯ ಶತಮಾನದಲ್ಲಿ ಇವುಗಳು ಚೀನಾದಿಂದ ಇತರ ದೇಶಗಳಿಗೆ ಆಮದುಗೊಂಡವೆಂದು ಹೇಳುತ್ತಾರೆ. ಸುಮಾರು 18ನೆಯ ಶತಮಾನದಲ್ಲಿ ಜರ್ಮನಿ ದೇಶದ ಯೊಹಾನೆಸ್ ಬಾಟ್ ಗರೆಂಬಾತನು ಕುಂಭೋದ್ಯಮದ ಮೂಲ ದ್ರವ್ಯವಾದ ಜೇಡಿಮಣ್ಣಿಗೆ ಎಲುಬಿನ ಭಸ್ಮವನ್ನು ಬೆರೆಸಿ ಪಾತ್ರೆಪಗಡೆಗಳನ್ನು ತಯಾರು ಮಾಡಿದನು. ಇದನ್ನೆ ಆತ 'ಎಲುಬು

ಪಿಂಗಾಣಿ' ಎಂದು ಕರೆದನು. ಅದು ಗುಣಮಟ್ಟದಲ್ಲಿ ಗಟ್ಟಿ ಹಾಗೂ ಅರೆಪಾರದರ್ಶವಾಗಿರುತ್ತದೆ.[6] ಈ ಪಿಂಗಾಣಿಗಳಲ್ಲಿ ಅಲಂಕಾರಿಕ ಪ್ರತಿಮೆಗಳು ಮತ್ತು ಆಟಿಕೆ ಹಾಗೂ ಗೊಂಬೆಗಳು ಎಂದು ವಿಂಗಡಿಸಬಹುದು. ಊಟದ ತಟ್ಟೆ, ನೀರು ಕುಡಿಯುವ ಲೋಟ, ತಿಂಡಿ ತಿನ್ನುವ ಗಂಗಾಳಗಳು, ಊಟದ ಟೇಬಲ್ ಮೇಲೆ ಬೇಯಿಸಿದ ಆಹಾರ ಪದಾರ್ಥಗಳನ್ನು ಹಾಕಿಡುವ ಬಟ್ಟಲು, ಬೋಗುಣಿಗಳು, ನೀರಿನ ಹೂಜಿಗಳು, ಮಧ್ಯದ ಬಾಟಲಿಗಳು, ಭರಣಿಗಳು, ಕಪ್ಪು, ಸಾಸರ್ ಇತ್ಯಾದಿಗಳನ್ನು ಗೃಹೋಪಯೋಗಿ ವಸ್ತಗಳನ್ನಾಗಿ ಬಳಸುತ್ತಾರೆ. ತಾಪಧಾರಕ ಪ್ರಭೇದಕಗಳು, ಇವನ್ನು ಹೆಚ್ಚು ಉಷ್ಣತೆಯನ್ನು ತಾಳಿಕೊಳ್ಳಬಲ್ಲ ರಿಫಿರಿಯಾಕ್ಟರಿ ಮಣ್ಣಿನಿಂದ ತಯಾರಿಸುವರು. ಈ ಮಣ್ಣು ಕಲ್ಲಿದ್ದಲು ಗಣಿಯಲ್ಲಿ ಸಿಗುತ್ತದೆ. ಇದರಲ್ಲಿ 50% ಸಿಲಿಕಾ ವಸ್ತು ಇರುತ್ತದೆ. ಇವುಗಳನ್ನು 1200 ರಿಂದ 1650 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ತಯರಿಸುವರು. ಇದಕ್ಕೆ ಸುಟ್ಟ ಇಟ್ಟಿಗೆಗಳ ಉತ್ತಮವದ ಉದಾಹರಣೆಗಳಾಗಿವೆ.[7]

ಟೆರ್ರಾಕೊಟಾ ಕೂಡಾ ಕುಂಭಕಲೆಯ ಒಂದು ಪ್ರಭೇದ. ಇವುಗಳನ್ನು ಮಡಕೆ, ಕುಡಿಕೆಗಳನ್ನು ಸುಡುವಂತೆ ಹೆಚ್ಚಿನ ಉಷ್ಣತೆಯಲ್ಲಿ ಸುಟ್ಟ ಕಾರಣ ಇವು ನಸುಗೆಂಪು ಇಲ್ಲದೆ ಕಿತ್ತಳೆ ಬಣ್ಣಗಳಿಂದ ಕೂಡಿರುತ್ತವೆ. ಇದರಿಂದ ಸಾಮಾನ್ಯವಾಗಿ ಅಲಂಕಾರಿಕ ವಸ್ತಗಳನ್ನು ತಯಾರಿಸುತ್ತಾರೆ. ಉಳಿದ ಭಾರತದಲ್ಲಿ ಹರಿಯುವ ಸಿಂಧೂ ಮತ್ತು ಗಂಗಾ ನದಿಯ ಮುಖಗಳಲ್ಲಿ ಹೆಚ್ಚು ಸಿಗುವ ಜೇಡಿ ಮಣ್ಣಿನಿಂದ ಅಲ್ಲಿ ಇದು ಹೆಚ್ಚಾಗಿ ಬೆಳೆಯಲು ಕಾರಣವಾಯಿತು. ಬಂಗಾಳದಲ್ಲಿ ಉತ್ತಮವದ ಜೇಡಿ ಮಣ್ಣು ದೊರೆಯುವುದರಿಂದ ಟೆರ್ರಾಕೊಟಾ ಕಲೆಗೆ ಬಂಗಾಲವು ತವರು ಮನೆಯಾಯಿತು. ಇತ್ತ ದಕ್ಷಿಣದಲ್ಲಿ ಶಾತವಾಹನ ಅರಸರು ಇದನ್ನು ಬಹಳಷ್ಟು ಪೋಷಿಸಿದರು. ಅವರೊಂದಿಗೆ ಮೌರ್ಯರು, ಕುಶಾನರು, ಗುಪ್ತರು ಇದನ್ನು ಇನ್ನಷ್ಟು ಪೋಷಿಸಿ ಬೆಳೆಸಿದರು. ಇಲ್ಲಿ ದೈವ ಮೂರ್ತಿಗಳನ್ನು ಅಚ್ಚಿನಿಂದ ತಯಾರಿಸುತ್ತಿದ್ದರು. ಸುವರ್ಣಯುಗವೆಂದು ಕರೆಯಲ್ಪಡುವ ಗುಪ್ತರ ಕಾಲದಲ್ಲಿ ಟೆರ್ರಾಕೊಟಾ ಕಲೆ ಮತ್ತು ಕುಂಭಕಲೆ ಸಂಸ್ಕೃತಿಯು ಸುವರ್ಣ ಯುಗದಲ್ಲಿತ್ತು. ಇವರ ಕಾಲದಲ್ಲಿ ತಯಾರಾದ ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿರುವ ಗಂಗಾ ಎನ್ನುವ ಶಿಲ್ಪವು ಮತ್ತು ಉಂಗುರ ಕೂದಲಿನ, ಹಣೆಮೇಲೆ ಕಣ್ಣುಳ್ಳ ಪಾರ್ವತಿಯ ಮುಖ ಶಿಲ್ಪವು ಅತ್ಯಂತ ಅದ್ಭುತ ಮುಖ ಶಿಲ್ಪವೆಂದು ಹೊಗಳಲ್ಪಟ್ಟಿದೆ. ಟೆರ್ರಾಕೊಟಾ ತಯಾರಿಕೆಯಲ್ಲಿ ಲೇಪ್ಯಕರ್ಮವೆನ್ನುವ ಹೊಸ ಕಲ್ಪನೆಯುಳ್ಳ ಶಬ್ದವು ಆಗ ಆವಿಷ್ಕಾರಗೊಂಡಿತು. ರಾಜಸ್ಥಾನದ ರಂಗಮಹಲು, ಬಂಗಾಳದ ಮಹಾಸ್ಥಾನ, ಬಂಗಳಾದ ಫರಹಪುರಗಳು ಅಂದು ಟೆರ್ರಾಕೊಟಾ ಕಲೆಯ ಹೆಸರಾಂತ ಕೇಂದ್ರಗಳಾಗಿದ್ದವು.

ಭಾರತದ ಭೂಪಟದ ತುದಿಯಲ್ಲಿರುವ ಜಮ್ಮುವಿನಿಂದ ಅನತಿ ದೂರದಲ್ಲಿರುವ ಅಖನೂರ ಟೆರ್ರಾಕೊಟಾ ಶಿಲ್ಪಕ್ಕೆ ತನ್ನದೇ ಆದ ವಿಶೇಷತೆ ಇದೆ. ಇಲ್ಲಿನ ಕೆಂಪು ಹೊಲವೊಂದರಲ್ಲಿ ಸುಮಾರು ಕ್ರಿ.ಪೂ 3ನೆಯ ಶತಮಾನದ ಗಾಂಧಾರ ಕಲೆಯ ನೆರಳಿನ ಸುಮಾರು 90 ಟೆರ್ರಾಕೊಟಾ ಸುಂದರ ಶಿಲ್ಪಗಳು ದೊರೆತಿವೆ. ಆ ಕಾಲವನ್ನು ಕಾಶ್ಮೀರದ ಸುವರ್ಣ ಯಗವೆಂದೂ ಹೆಸರಿಸಲಾಗುತ್ತದೆ. ಇಲ್ಲಿನ ಕೆಲವು ಪ್ರದೇಶಗಳಲ್ಲಿ ಅಂದಿನ ಬೌದ್ಧ ಕೇಂದ್ರಗಳಾದ ಬರಾಮುಲ್ಲಾ ಹಾರವನ್, ವುಷಕ ಎಂದು ಕರೆಯಲಾಗುತ್ತಿರುವ ಹೂವಿಷ್ಕಾಪುರದಲ್ಲಿ ಟೆರ್ರಾಕೊಟಾ ಶಿಲ್ಪದ ವಿವಿಧ ಬಗೆಯ ಆಭರಣಗಳು ದೊರೆತಿವೆ.[8] 'ಕಾಯಕವೇ ಕೈಲಾಸ' ಎಂದಿದ್ದಾರೆ ಬಸವಣ್ಣನವರು, ಯಾವುದೇ ಕೆಲಸವಾಗಿರಲಿ ಶ್ರದ್ಧೆ ಆಸಕ್ತಿ ಮುಖ್ಯ, ವ್ಯಕ್ತಿಯ ಅರ್ಹತೆ ಅಥವಾ ಯೋಗ್ಯತೆಯನ್ನು ಅಳೆಯುವುದು ಆತನ ಉದ್ಯೋಗದಿಂದಲ್ಲ, ಆತನ ನಿರ್ವಹಣಾ ಸಾಮರ್ಥ್ಯದಿಂದ ತನ್ನ ಕೈಚಳಕದಿಂದ ಸುಂದರ ಹಾಗೂ ಕಲಾತ್ಮಕ ಮಣ್ಣಿನ ಕುಂಭಗಳನ್ನು

ಸೃಷ್ಟಿಸಬಹುದು. ಮನುಷ್ಯನ 'ಸುಲಭ ಜೀವನ ಪ್ರವೃತ್ತಿ' ಹೊಸ ಹೊಸ ಅವಿಷ್ಕಾರಗಳನ್ನು ಹುಡುಕುತ್ತಾ ಕಂಡುಕೊಳ್ಳುತ್ತಾ ಬಂದಿದೆ. ಇದರಿಂದಾಗಿ ಅನೇಕ ಹಳೆಯ ರೀತಿಗಳು ಬದಲಾಗಿದೆ. ಕೆಲವು ಜನ ತಮ್ಮ ಬುದ್ಧಿವಂತಿಕೆ ಹಾಗೂ ಕುಶಲತೆಯಿಂದ ಇದನ್ನೊಂದು ಕಲಾತ್ಮಕ ವೃತ್ತಿಯಾಗಿಸಿಕೊಂಡಿದ್ದಾರೆ.

ಕುಂಭಕಲೆ ಕುಂಬಾರನ ಕೈಯಿಂದಲೇ ಜಾರಿ ಹೋಗಿರುವುದು ಈಗ ಕಹಿ ಇತಿಹಾಸ. ಆದರೆ ಕುಂಬಾರಿಕೆ ಅಳಿದಿಲ್ಲ. ಕಲಾ ಮಾಧ್ಯಮವಾಗಿ ಬೆಳೆದಿದೆ. ಕುಂಭಕಲೆಯನ್ನು ಕಲಾ ಮಾಧ್ಯಮವನ್ನಾಗಿಸಿಕೊಂಡು ದೇಶ, ವಿದೇಶಗಳಲ್ಲಿ ಬಹಳಷ್ಟು ನುರಿತ ಹೆಸರಾಂತ ಕಲಾವಿದರಿದ್ದಾರೆ. ಸ್ವಿಟ್ಸರ್ಲೆಂಡಿನ ಜಾನ್ ಪಾಟರ್, ಇಂಗ್ಲೆಂಡ್‌ನ ಥಾಮಸ್ ವ್ಹೆಲ್ಡನ್, ಬರ್ನಾಡ್ ಲೀಚ್, ಜೋಷೈ ವೆಡ್ಗವುಡ್ ಮತ್ತು ಗುಜರಾತಿನ ಅಮರೀಶ್ ಬಾಯಿ, ಮೋತಿ ಬಾಯಿ ಬೊದಲಾದವರು ಹೆಸರಾಂತ ಕುಂಭ ಕಲಾಕಾರರಾಗಿ ಹೆಸರನ್ನು ಪಡೆದಿದ್ದಾರೆ.[9]

ಕೊನೆಟಿಪ್ಪಣಿಗಳು

1. *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ 2– ಕರಕುಶಲ ಕಲೆಗಳು.* (2001). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ.4
2. ಅದೇ. ಪು.297
3. ಬಸವರಾಜ ಕಂಚೂರ. (2003). ಕುಂಬಾರ ಜನಾಂಗ. ಪುಟ.109–112
4. ಜ್ಞಾನ ಗಂಗೋತ್ರಿ, ಸಂ.4 (ಪು 178)
5. ಬಸವರಾಜ ಕಂಚೂರ. (2003). *ಪೂರ್ವೋಕ್ತ.* ಪುಟ.145–150
6. *ಜಾನಪದ ದರ್ಶನ–7.* ಪುಟ. 204
7. ಬಸವರಾಜ ಕಂಚೂರ. (2003). *ಪೂರ್ವೋಕ್ತ.* ಪುಟ.145–150
8. ಅದೇ. ಪುಟ.151–155.

ಪರಾಮರ್ಶನ ಗ್ರಂಥಗಳು

- ಅಂಗಡಿ, ಎಸ್.ಎಸ್. (1998). ಕುಂಬಾರ ವೃತ್ತಿ ಪದಕೋಶ, ಲಿಂಗಾಯತ ಅಧ್ಯಯನ ಸಂಸ್ಥೆ.
- ಬಸವರಾಜ ಕುಂಚೂರು. (2003). *ಕುಂಬಾರ ಜನಾಂಗ.* ಚಕ್ರ ಪ್ರಕಾಶನ.
- *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ 2– ಕರಕುಶಲ ಕಲೆಗಳು.* (2001). ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- *ಗ್ರಾಮೀಣ ವೃತ್ತಿಗಳು–ಗ್ರಾಮ ಸಂಸ್ಕೃತಿ ಮಾಲೆ–1.* ಕನ್ನಡ ಪುಸ್ತಕ ಪ್ರಾಧಿಕಾರ.